(ದಿನಾಂಕಃ 20.09.2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)

**ಪಾಟೀ ಸವಾಲುಃ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಎ.ಪಿ.ಪಿ/ಎ.ಜಿ.ಪಿ ರವರಿಂದ ಃ-**

1. ನಾವು ನಮ್ಮ ಸಂಘದಲ್ಲಿ 31 ಜನ ಸದಸ್ಯರಾಗಿರುತ್ತೇವೆ. ನಮ್ಮ ಸಂಘ ನೊಂದಣಿ ಆದ ಸಂಘ ಆಗಿರುತ್ತದೆ. ಅದರ ಬಗ್ಗೆ ನೊಂದಣಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ನಾನು ನಮ್ಮ ಸಂಘದ ನಿಯಮಾವಳಿಯ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ.

2. ನಾನು ನಮ್ಮ ಸಂಘದ ಪರವಾಗಿ ದಾವಾ ಆಸ್ತಿಯನ್ನು ಖರೀದಿಸಿರುವುದಿಲ್ಲ ಎಂದರೆ ಸರಿ. ನಾನು ದಾವಾಆಸ್ತಿಯನ್ನು ಯಾವುದೇ ವ್ಯಕ್ತಿಯಿಂದ ಖರೀದಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿ ನಮ್ಮ ಸಂಘಕ್ಕೆ ಸರ್ಕಾರ ದಿಂದ ಮಂಜೂರಾಗಿರುವುದಿಲ್ಲ ಎಂದರೆ ಸರಿ.

3. ಪ್ರತಿವಾದಿಗಳು ಸರ್ಕಾರಿ ನೌಕರಸ್ಥರಾಗಿರುತ್ತಾರೆ ಎಂದರೆ ಸರಿ, ಈ ದಾವಾ ಆಸ್ತಿಯನ್ನು ನಮ್ಮ ಸಂಘದ ಹೆಸರಿನಲ್ಲಿ ಖಾತೆ ಮಾಡುವಾಗ ಸಹಾಯಕ ಸಂಘದ ನೊಂದಾಯಿತ ಅಧಿಕಾರಿಯಿಂದ ಅನುಮತಿಯನ್ನು ಪಡೆದಿರುವುದಿಲ್ಲ.

**(ಪ್ರತಿವಾದಿ 2 ರಿಂದ 5 ರವರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.